

ಭೂ ್ರಣ ದ ಚೂರುಗಳು ಬೆಳೆದು ನೂರು ಮಕ್ಕಳು ಹುಟ್ಟುತ್ತವೆ. ಆ ಕಥೆಯನ್ನು ಕೇಳಿದಾಗ ನಾವೆಲ್ಲರೂ 'ಆಹ್! ಎಂಥ ಅದ್ಭುತ ಕಲ್ಪನೆ' ಎಂದು ತಲೆದೂಗಿರುತ್ತೇವೆ. ಆದರೆ ಈಗ ಅದು ಕಲ್ಪನೆಯಷ್ಟೇ ಆಗಿ ಉಳಿದಿಲ್ಲ. ಅದಕ್ಕೆ ಜೀವ ಬಂದು ಹಲವು ವರ್ಷಗಳಾಗಿವೆ. ಆರೋಗ್ಯಯುತ ಮಹಿಳೆಯ ಅಂಡಾಣುಗಳನ್ನು ಶೇಖರಿಸಿ ಶೈತ್ಯೀಕರಿಸಿಟ್ಟು ಮಗುವನ್ನು ಪಡೆಯುವ ಪ್ರಯೋಗಗಳು ಯಶಸ್ವಿಯಾಗಿವೆ. ಆದರೆ ವೀರ್ಯಾಣು ದಾನ ಮತ್ತು ವೀರ್ಯಾಣು ಬ್ಯಾಂಕ್ ಕುರಿತು ಜನರಿಗೆ ತಿಳಿದಿರುವಷ್ಟು, ಅಂಡಾಣು ಸಂಗ್ರಹಿಸಿ ಶೈತ್ಯೀಕರಿಸಿಡುವುದರ ಕುರಿತು ಎಲ್ಲರಿಗೂ ತಿಳಿದಿಲ್ಲ. ಅದು ಈಗಷ್ಟೇ ಜನಪ್ರಿಯವಾಗುತ್ತಿರುವ, ಅಷ್ಟೇ ಮೆಚ್ಚುಗೆ, ಟೀಕೆಗಳನ್ನು ಎದುರಿಸುತ್ತಿರುವ ತಂತ್ರಜ್ಞಾನ.

ವೀರ್ಯಾಣುವನ್ನು ದಾನ ಮಾಡುವ ಕಥಾಹಂದರವನ್ನಿಟ್ಟುಕೊಂಡು 2012ರಲ್ಲಿ 'ವಿಕ್ಕಿ ಡೋನರ್' ಎಂಬ ಸಿನಿಮಾ ಹಿಂದಿಯಲ್ಲಿ ಬಂದಾಗ, ಆ ಬಗ್ಗೆ ಹಿಂದೆ ಓದಿ ತಿಳಿಯದವರಿಗೆ ಸಿನಿಮಾ ನೋಡಿ ಹೀಗೂ ಇದೆಯಾ ಎಂದು ಆಶ್ಚರ್ಯವಾಗಿತ್ತು. ಸಿನಿಮಾದ ಕೊನೆಯಲ್ಲಿ ನಾಯಕನ ವೀರ್ಯದಿಂದ ಬೇರೆ ದಂಪತಿಗಳಿಗೆ ಹುಟ್ಟಿದ ರಾಶಿ ರಾಶಿ ಮಕ್ಕಳನ್ನು ನೋಡಿದಾಗ ಆಶ್ಚರ್ಯ, ಗೊಂದಲದ ಜೊತೆ ಬಿದ್ದು ಬಿದ್ದು ನಕ್ಕ ವೀಕ್ಷಕರ ಸಂಖ್ಯೆ ಕಮ್ಮಿಯೇನಲ್ಲ. ಇನ್ನು ನಮ್ಮ 'ಚಂದನವನ'ದಲ್ಲಿ 2020ರಲ್ಲಿ ತೆರೆಕಂಡ 'ಜಂಟಲ್‌ಮನ್' ಸಿನಿಮಾದಲ್ಲಿ ಯುವತಿಯರನ್ನು ಅಪಹರಿಸಿ ಕಾನೂನುಬಾಹಿರವಾಗಿ ಅಂಡಾಣು ಸಂಗ್ರಹಿಸಿ 'ಐವಿಎಫ್'ಗಾಗಿ ದಂಪತಿಗಳಿಗೆ ಮಾರುವ ಕಥೆಯಿದೆ. ಅದು ಅಂಡಾಣು ಸಂಗ್ರಹಣೆಯ ಇನ್ನೊಂದು ಕರಾಳ ಮುಖವನ್ನು ತೆರೆದಿಡುತ್ತದೆ.

## ಏನಿದು ಅಂಡಾಣು ಶೈತ್ಯೀಕರಣ?

ನಮ್ಮ ಹಣವನ್ನು ಹೇಗೆ ಬ್ಯಾಂಕ್‌ನಲ್ಲಿ ಕೂಡಿಟ್ಟು, ಬೇಕು ಎಂದಾಗ ತೆಗೆದು ಬಳಸುತ್ತೇವೆಯೊ ಅದೇ ಮಾದರಿಯಲ್ಲಿ ಅಂಡಾಣುಗಳನ್ನು ಪ್ರಯೋಗಾಲಯದಲ್ಲಿ ಸ್ವಂತ ಬಳಕೆಗೆ ಅಥವಾ ದಾನ ಮಾಡಲು ಸಂಗ್ರಹಿಸಿಡುವ ವ್ಯವಸ್ಥೆ ಅಂಡಾಣು ಬ್ಯಾಂಕಿಂಗ್.

ಆರೋಗ್ಯಯುತ ಮಹಿಳೆಗೆ ಉತ್ತಮ ಗುಣಮಟ್ಟದ ಅಂಡಾಣುಗಳು ಬಿಡುಗಡೆಯಾಗಲು ವೈದ್ಯಕೀಯ ಚಿಕಿತ್ಸೆ ನೀಡಲಾಗುತ್ತದೆ. ಪ್ರಚೋದನಾತ್ಮಕ ಚಿಕಿತ್ಸೆಯ ಪರಿಣಾಮ ಉತ್ಪತ್ತಿಯಾದ ಆರೋಗ್ಯಯುತ ಬಲಿಷ್ಠ ಅಂಡಾಣುಗಳನ್ನು ಸಂಗ್ರಹಿಸಿ ಪ್ರಯೋಗಾಲಯದಲ್ಲಿ ಘನೀಕರಿಸಲಾಗುತ್ತದೆ. ಆ ಅಂಡಾಣು ಗಾಜಿನ ರೂಪದಲ್ಲಿ ಕಾಣಿಸುವುದರಿಂದ ಘನೀಕರಿಸುವ ಕ್ರಿಯೆಗೆ 'ವಿಟ್ರಿಫಿಕೇಶನ್' ಎನ್ನಲಾಗುತ್ತದೆ. ಸಂಗ್ರಹಕ್ಕೆ ಯೋಗ್ಯವಾದ ಉತ್ತಮ ಗುಣಮಟ್ಟದ ಅಂಡಾಣು 20ರಿಂದ 30ನೇ ವಯಸ್ಸಿನವರೆಗೆ ಉತ್ಪತ್ತಿ ಆಗುವುದರಿಂದ ಆ ವಯಸ್ಸು ಅಂಡಾಣು ಸಂಗ್ರಹಣೆ ಸೂಕ್ತ ಎಂದು ಅನೇಕ ಸಂಶೋಧನಾ ಸಂಸ್ಥೆಗಳು ಹೇಳುತ್ತವೆ. ಹಾಗೆ ಸಂಗ್ರಹಿಸಿಟ್ಟ ಎಲ್ಲಾ ಅಂಡಾಣುಗಳೂ ಫಲ ಕೊಡುವುದಿಲ್ಲ. ಹಾಗಾಗಿ ಅಂಡಾಣು ಸಂಗ್ರಹದ ಉದ್ದೇಶ ಯಶಸ್ವಿಯಾಗಬೇಕಾದರೆ ಅಂಡಾಣು ನೀಡುವವರ ವಯಸ್ಸು ಮತ್ತು ಅಂಡಾಣುಗಳ ಗುಣಮಟ್ಟ, ಹಾಗೆ ಅಂಡಾಣುಗಳ ಸಂಖ್ಯೆ ಇವು ಮುಖ್ಯ. ಹೀಗಾಗಿ 38 ವರ್ಷ ಮೇಲ್ಪಟ್ಟ ಮಹಿಳೆಯರಿಗೆ ಯಾವುದೇ ಕಾರಣಕ್ಕೂ ಅಂಡಾಣು ಸಂಗ್ರಹಣೆಯ ಸಲಹೆಯನ್ನು ವೈದ್ಯರು ನೀಡುವುದಿಲ್ಲ.

## ಅಂಡಾಣು ಘನೀಕರಣದ ಉದ್ದೇಶ?

ಅಂಡಾಣುಗಳನ್ನು ಕೂಡಿಡಲು ಪ್ರಮುಖವಾದ ಎರಡು ಕಾರಣಗಳೆಂದರೆ, ವೈದ್ಯಕೀಯ ಕಾರಣ ಮತ್ತು ಲೈಫ್ ಸ್ಟೈಲ್ ಕಾರಣ.

ಯಾವುದೇ ರೀತಿಯ ಕ್ಯಾನ್ಸರ್‌ಗೆ ಒಳಗಾದವರಿಗೆ ನೀಡುವ ಕಿಮೋಥೆರಪಿ ಮತ್ತು ರೇಡಿಯೊಲಜಿಯ ಪರಿಣಾಮವಾಗಿ ಅಂಡಾಣು ಬಿಡುಗಡೆ ಸಂಖ್ಯೆ ಕಡಿಮೆಯಾಗುವುದಲ್ಲದೆ, ಅಂಡಾಣುವಿನ ಗುಣಮಟ್ಟ ಕೂಡ ಕ್ಷೀಣಿಸುತ್ತದೆ. ಇದರಿಂದಾಗಿ ಕ್ಯಾನ್ಸರ್ ಚಿಕಿತ್ಸೆ ಆರಂಭಿಸುವ ಮೊದಲು ಅಂಡಾಣು ಸಂಗ್ರಹಣೆಗೆ ಸ್ತ್ರೀಯರು ಮುಂದಾಗುತ್ತಾರೆ. ಅಮೆರಿಕದಂಥ ರಾಷ್ಟ್ರದಲ್ಲಿ ಅಂಡಾಣು ಶೇಖರಣೆ ಬಹುವಾಗಿ ಚಾಲ್ತಿಯಲ್ಲಿರಲು ಕಾರಣ ಗರ್ಭಧರಿಸುವ ವಯಸ್ಸಿನ ಸ್ತ್ರೀಯರಿಗೆ ಹೆಚ್ಚಾಗಿ ಕಾಡುತ್ತಿರುವ ಕ್ಯಾನ್ಸರ್. ಆದ್ದರಿಂದಲೇ ಚಿಕಿತ್ಸೆಗೂ ಮುಂಚೆ ವೈದ್ಯರು ಅಂಡಾಣು ಶೇಖರಿಸಿಡುವ ಸಲಹೆ ನೀಡುತ್ತಾರೆ.

ಮೂಲದಲ್ಲಿ ಅಂಡಾಣು ಶೇಖರಿಸಿಡುವ ಮುಖ್ಯ ಉದ್ದೇಶ ವೈದ್ಯಕೀಯ ಕಾರಣವೇ ಆಗಿದ್ದರೂ, ಅದಕ್ಕೆ ಹಲವು ಸಾಮಾಜಿಕ ಆಯಾಮಗಳೂ ಇವೆ. ವೃತ್ತಿಯ ಕಾರಣದಿಂದ ಮಗು ಪಡೆಯುವ ಯೋಜನೆಯನ್ನು ಮುಂದೂಡುವವರು, ಮಗು ಪಡೆಯಲು ಮಾನಸಿಕವಾಗಿ ಸಿದ್ಧರಿಲ್ಲದವರು, ವಂಶ ಪಾರಂಪರ್ಯವಾಗಿ ಸಮಯಕ್ಕೂ ಮೊದಲೇ ಋತುಸ್ರಾವ ನಿಲ್ಲುವ ಆತಂಕ